ಪದಬಂಧ



ಎಡದಿಂದ ಬಲಕ್ಕೆ :

1. ಸಮಗ್ರ ಅಭಿವೃದ್ಧಿ ಮಾಡಲೇಬೇಕೆಂದು ಯುದ್ಧವೇ ನಡೆದಿದೆ (3)
3. ಆವೇಶದಲ್ಲಿ ನಡೆದ ಕೃತ್ಯವನ್ನು ನೆನೆದರೇ ದುಃಖವಾಗುತ್ತದೆ (3)
4. ಮನುಕುಲದ ಎಲ್ಲರಿಗೂ ಪ್ರಿಯಳಾದ ಧನ ದೇವತೆ ಗೊತ್ತೇ ? (3)
6. ಅವನನ್ನು ಮಾತನಾಡಿಸಲೂ ಒಪ್ಪಿಗೆ ಪಡೆಯಬೇಕೇ ? (4)
7. ಪಹರೆ ನಿಂತವನ ಉದ್ದೇಶ 'ಅನ್ಯರ ನೆಮ್ಮದಿ' (4)
9. ವ್ಯಾಯಾಮ ಕ್ರಮದ ವರ್ಣನೆಯ ತುಂಬ ಬಣ್ಣವೋ ಬಣ್ಣ ! (4)
11. ಅಬ್ಬರಿಸುವ ಪ್ರಚಾರ ತಂತ್ರವನ್ನು ಬೇಗ ಶುರು ಮಾಡು (4)
15. ತಾವರೆಗಳನ್ನು ತರಿಸುವ ಕೆಲಸ ಎಷ್ಟು ಬೇಗ ! (3)
16. ಕಮ್ಮಿ ಏನೂ ಇಲ್ಲ. ಆದರೂ ಮನದ ತುಂಬ ಆಸೆಯೋ ಆಸೆ (3)
17. ಶೂರರಿಗೆಲ್ಲ ಹಂಚಿದ್ದು ಬರೀ ಮಾವಿನ ಹಣ್ಣು (3)

ಮೇಲಿಂದ ಕೆಳಕ್ಕೆ :

1. ಸಂಬಂಧಗಳನ್ನು ಗಟ್ಟಿಗೊಳಿಸಲು ತಕ್ಕ ಸನ್ನಿವೇಶ ಬಂದಿದೆ (3)
2. ಎಲ್ಲರೂ ಮಲಗಿರುವಾಗಲೇ ಅರಳಿತ್ತು ಸುಂದರ ಹೂವು (3)
3. ವಿಕಾರ ಮನವನ್ನು ತಿದ್ದಿ ಸರಿಪಡಿಸಿದ್ದು ಭಾರೀ ಸಾಧನೆಯೇ ಸರಿ (3)
5. ಹಿರಿಮೆಗಳೇ ಹೇರಳ ; ಅದು ನಮ್ಮ ಸೂರ್ಯ (3)
6. ಅಭ್ಯುದಯವೇನಿಲ್ಲ. ಏಕೆಂದರೆ, ಅಲ್ಲಿ ಎಲ್ಲಕ್ಕೂ ಕೊರತೆ (3)
8. ತಣ್ಣಗಿನ ನೀರು ಕುಡಿಸು ; ಸಂತೃಪ್ತರನ್ನಾಗಿಸು (3)
10. ಅಲ್ಲಿನ ಹತ್ತು ಮನೆಗಳಿಗೂ ಒಂದೊಂದು ಪ್ರಾಮುಖ್ಯ ಇದೆ (3)
12. ಜನರಿಗೆಲ್ಲ ಅವನಿಂದ ಲಭಿಸಿದ್ದು ಮನೋಲ್ಲಾಸ (3)
13. ಆತುರದಲ್ಲಿ ಅರಿವಿಗೇ ಬರಲಿಲ್ಲ ನೋಡಿ ವ್ಯತ್ಯಾಸ (3)
14. ಈ ಬಗೆಯ ಅಲಂಕಾರಕ್ಕೆ ಇದು ತಕ್ಕ ಸಮಯವಲ್ಲ (3)

### 09-08-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅನುರಾಗ 3. ಅಖಂಡ 4. ವಲ್ಲಭ 6. ವಿಶ್ರಮಿಸು 7. ಪ್ರಚಾರಕ
9. ಪಿಸುಮಾತು 11. ನವಕ್ರಮ ; 13. ಸೆಕೆಗಾಲ 15. ದಿಗಂಬರ
17. ಣರಮಾ (ಮಾರಣ ಹಿಂದುಮುಂದು) 18. ಜನಕ ; 19. ಕುಮುದಿನಿ

ಮೇಲಿಂದ ಕೆಳಕ್ಕೆ :

1. ಅಡವಿ ; 2. ಗವಸು ; 3. ಅಸ್ಥಿರ ; 5. ಭಜಿಸು 7. ಪ್ರಧಾನ;
8. ಕದೀಮ ; 9. ಪಿಪಾಸೆ ; 10. ತುಮುಲ 12. ಕ್ರಮೇಣ
14. ಕೆಡುಕ ; 15. ದಿಮಾಕು ; 16. ರಜನಿ

ಪ್ರಶ್ನಾ ಂಕಣ

## 'ಸ್ಟ್ರಾಂಗ್ಲರ್ ಫಿಗ್': ಏನು ವಿಶೇಷ?

ಸಸ್ಯ ಸಾಮ್ರಾಜ್ಯದಲ್ಲಿ 'ಮೊರೇಸಿಯೇ' ಎಂಬ ಒಂದು ವಿಶಿಷ್ಟ ಕುಟುಂಬ ಇದೆ. ಈ ಕುಟುಂಬದ 'ಫೈಕಸ್' ವಂಶದಲ್ಲಿ ವೃಕ್ಷಗಳು, ಅಪ್ಪುಗಿಡಗಳು (ಎಪಿಫೈಟ್ಸ್), ಬಳ್ಳಿಗಳು ಇತ್ಯಾದಿ ಒಟ್ಟು 850 ಪ್ರಭೇದಗಳಿವೆ.

ಫೈಕಸ್ ವಂಶಕ್ಕೆ ಸೇರಿದ ವೃಕ್ಷಗಳದು ಮೂಲತಃ ವೃಷ್ಟಿ ವನಗಳಲ್ಲಿ ನೆಲೆ. ನಿಬಿಡ ಕಾನನಗಳಾದ ವೃಷ್ಟಿವನಗಳಲ್ಲಿ, ನೆಲದ ಮೇಲಿನ ಕತ್ತಲಲ್ಲಿ ಈ ವೃಕ್ಷಗಳ ಬೀಜಗಳು ಮೊಳಕೆಯೊಡೆಯುವುದು, ಬೆಳೆಯುವುದು ಭಾರೀ ದುಸ್ತರ ಕೆಲಸ. ಅದಕ್ಕೆ ಪರಿಹಾರವಾಗಿ ಈ ವಂಶದ ವೃಕ್ಷಗಳು, ಎಂದರೆ 'ಫಿಗ್ ವೃಕ್ಷಗಳು' ಪರಮ ಸೋಜಿಗದ ಯಶಸ್ವೀ ತಂತ್ರವೊಂದನ್ನು ರೂಪಿಸಿಕೊಂಡಿವೆ. ಈ ವೃಕ್ಷಗಳ ಹಣ್ಣುಗಳನ್ನು ತಿನ್ನುವ ಮಂಗಗಳು, ಹಕ್ಕಿಗಳು ಇತ್ಯಾದಿ ಪ್ರಾಣಿಗಳ ವಿಸರ್ಜನೆಯಲ್ಲಿ ಹೊರಬಂದು ಇತರ ಮಹಾ ವೃಕ್ಷಗಳ ಕಾಂಡ ಮತ್ತು ಕೊಂಬೆಗಳ ಕುಳಿಗಳಲ್ಲಿ ಬೀಳುವ ಬೀಜಗಳು ಅಲ್ಲೇ ಮೊಳಕೆಯೊಡೆಯುತ್ತವೆ ; ಸಸಿಗಳಾಗುತ್ತವೆ. ಹಾಗೆ ಆಶ್ರಯ ನೀಡಿದ ಮಹಾ ವೃಕ್ಷಗಳ ಅಂಥ ಕುಳಿಗಳಲ್ಲಿ ಸಂಗ್ರಹವಾಗಿ ಕೊಳೆತು ನಿಂತ ಎಲೆ ಗೊಬ್ಬರದಲ್ಲೇ ಅಪ್ಪು ಗಿಡಗಳಂತೆ ಬೆಳೆಯತೊಡಗುತ್ತವೆ.

ಜೊತೆ ಜೊತೆಗೇ ಅಂಥ ಸಸಿಗಳು ದಾರ ರೂಪದ 'ಗಾಳಿ ಬೇರು'ಗಳನ್ನು ಕೆಳಮುಖನಾಗಿ ಭೂ ನೆಲದ ಕಡೆಗೆ ಇಳಿಬಿಡುತ್ತವೆ. ಹತ್ತಾರು ಸಂಖ್ಯೆಯ ಇಂತಹ ಬೇರುಗಳು ಆಶ್ರಯಧಾತ ವೃಕ್ಷದ ಕಾಂಡವನ್ನೇ ಸುತ್ತುವರೆದು, ಅಪ್ಪಿ ಹಿಡಿದು ನೆಲಕ್ಕೆ ಇಳಿಯುತ್ತವೆ. ಈ ಬೇರುಗಳು ಒಮ್ಮೆ ನೆಲ ಮುಟ್ಟಿದೊಡನೆ ಇತರೆಲ್ಲ ಸಸ್ಯಗಳಂತೆಯೇ ಮಣ್ಣಿನಿಂದಲೇ ಸಾರ ಹೀರುತ್ತ, ದಪ್ಪನಾಗುತ್ತ ಫಿಗ್ ಸಸ್ಯ ಕ್ಷಿಪ್ರವಾಗಿ ಬೆಳೆಯತೊಡಗುತ್ತದೆ.

ವಿಪರ್ಯಾಸ ಏನೆಂದರೆ, ಫಿಗ್ ವೃಕ್ಷದ ಈ ವಿಶಿಷ್ಟ ಬೆಳವಣಿಗೆಯ ಕ್ರಮ ಆಶ್ರಯದಾತ ವೃಕ್ಷಕ್ಕೆ ಗಂಡಾಂತರಕಾರಿಯಾಗುತ್ತದೆ. ಏಕೆಂದರೆ, ಆಶ್ರಯದಾತ ವೃಕ್ಷಕಾಂಡವನ್ನು ಹೆಬ್ಬಾವಿನಂತೆ ಬಿಗಿಯಾಗಿ ಅಪ್ಪಿ ಹಿಡಿದು ದಪ್ಪನಾಗುವ, ಬಲಿಷ್ಠವಾಗುವ ಬೇರುಗಳು ಆ ವೃಕ್ಷದ ಉಸಿರುಗಟ್ಟಿಸುತ್ತವೆ. ತತ್ಪರಿಣಾಮವಾಗಿ ಎಲೆಗಳ ಕಡೆಗೆ ನೀರು ಮತ್ತು ಪೋಷಕಾಂಶಗಳು




ಸರಬರಾಜಾಗದಂತಾಗುತ್ತದೆ. ಕೆಲ ವರ್ಷಗಳಲ್ಲೇ ಆ ವೃಕ್ಷ ಮೃತವಾಗುತ್ತದೆ. ಆ ವೇಳೆಗೆ ಗಟ್ಟಿ ಬೇರುಗಳ ದೃಢ ಆಧಾರ ಗಳಿಸುವ ಫಿಗ್ ವೃಕ್ಷ ಸ್ವತಂತ್ರವಾಗಿ ನಿಂತು ಬೆಳೆಯತೊಡಗುತ್ತದೆ ; ಮಹಾ ವೃಕ್ಷವಾಗುತ್ತದೆ (ಚಿತ್ರ 1, 2 ನೋಡಿ).

ಹೀಗೆ ಆಶ್ರಯದಾತ ವೃಕ್ಷದ 'ಉಸಿರುಗಟ್ಟಿಸುವ' ಕ್ರಮದಿಂದಾಗಿಯೇ ಫಿಗ್ ವೃಕ್ಷಕ್ಕೆ 'ಸ್ಟ್ರಾಂಗ್ಲರ್ ಫಿಗ್' ಎಂಬ ಅಭಿದಾನ. ವಿಶೇಷ ಏನೆಂದರೆ, ಅತ್ಯಂತ ಪರಿಚಿತವಾಗಿರುವ, ಪ್ರಸಿದ್ಧವೂ ಆಗಿರುವ 'ಆಲದ ವೃಕ್ಷ' ( ಫೈಕಸ್ ಬೆಂಗಾಲೆನ್ಸಿಸ್ ) ಕೂಡ ಸ್ಟ್ರಾಂಗ್ಲರ್ ಫಿಗ್‌ಗಳ ಗುಂಪಿಗೇ ಸೇರಿದೆ.

■ ಎನ್. ವಾಸುದೇವ್